# ಕರ್ನಾಟಕ ಸರ್ಕಾರ

ಸಂಖ್ಯೆ:ಲೋಇ 273 ಸಿಆರ್‌ಎಂ 2007

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:05/06/2007

## ಸುತ್ತೋಲೆ

ವಿಷಯ: ಲೋಕೋಪಯೋಗಿ ಇಲಾಖೆಯ ರಸ್ತೆಗಳ ನಿರ್ವಹಣೆ ಬಗ್ಗೆ.

ಲೋಕೋಪಯೋಗಿ ಇಲಾಖೆಯು ರಾಜ್ಯದ ಮುಖ್ಯ ಸಂಚಾರವಾಹಿನಿಗಳಾದ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಉಸ್ತುವಾರಿಯನ್ನು ಹೊಂದಿದ್ದು, ಸದರಿ ರಸ್ತೆಗಳ ದು:ಸ್ಥಿತಿಯ ಬಗ್ಗೆ ಆಗಾಗ್ಗೆ ಪತ್ರಿಕೆಗಳಲ್ಲಿ ಹಾಗೂ ಇತರೆ ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿರುವುದು ಇಲಾಖೆಯ ನಿರ್ವಹಣಾ ಸಾಮರ್ಥ್ಯದ ಬಗ್ಗೆ ಪ್ರತಿಬಿಂಬಿತವಾಗುತ್ತದೆ. ರಾಜ್ಯದ ಉದ್ದಗಲದ ಈ ರಸ್ತೆಗಳನ್ನು ಏಕಕಾಲದಲ್ಲಿ ಸುಧಾರಣೆ ಮಾಡುವುದು ಸಾಧ್ಯವಿಲ್ಲವಾದರೂ, ಸದರಿ ರಸ್ತೆಗಳಲ್ಲಿ ಅತಿ ಅವಶ್ಯವಿರುವ ಕಾಮಗಾರಿಗಳಾದ ಗುಂಡಿ ಮುಚ್ಚುವುದು, ಜಂಗಲ್ ಕ್ಲಿಯರೆನ್ಸ್ ಮಾಡುವುದು, ಮಳೆ ನೀರಿನ ಮೋರಿಗಳು ಹಾಗೂ ಸಣ್ಣಪುಟ್ಟ ಸೇತುವೆ ಹಾಗೂ ಅಡ್ಡ ಮೋರಿಗಳನ್ನು ಕಾಲಕಾಲಕ್ಕೆ ದುರಸ್ತಿ ಮಾಡಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವುದು ಇಲಾಖೆಯ ಆದ್ಯ ಕರ್ತವ್ಯವಾಗಿರುತ್ತದೆ.

ಪ್ರಸ್ತುತ: ಮಳೆಗಾಲವು ಶೀಘ್ರದಲ್ಲೇ ಪ್ರಾರಂಭವಾಗಲಿದ್ದು, ಈಗಾಗಲೇ ಬಹಳಷ್ಟು ಕಡೆ ಮಳೆಯಿಂದ ರಸ್ತೆ ಸಂಚಾರಕ್ಕೆ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವ ಹಿನ್ನೆಲೆಯಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೊಳಪಡುವ ಎಲ್ಲಾ ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚುವುದು, ಜಂಗಲ್ ಕ್ಲಿಯರೆನ್ಸ್, ಮಳೆ ನೀರಿನ ಮೋರಿಗಳ ದುರಸ್ತಿ ಹಾಗೂ ಅಡ್ಡ ಮೋರಿಗಳು ಮತ್ತು ಸೇತುವೆಗಳ ನಿರ್ವಹಣೆಗಳನ್ನು ಆದ್ಯತೆ ಮೇಲೆ ಕೈಗೊಳ್ಳುವಂತೆ ಇಲಾಖೆಯ ಎಲ್ಲಾ ಅಧೀನ ಅಧಿಕಾರಿಗಳಿಗೆ ಸೂಚಿಸಲಾಗಿದೆ. ನಿರ್ವಹಣೆ ಕಾಮಗಾರಿಗಳಿಗೆ ಬೇಕಾಗುವ ಅನುದಾನದ ವಿವರಗಳನ್ನು ರಸ್ತೆವಾರು ಕಾರ್ಯಕ್ರಮದ ಪಟ್ಟಿ ಮಾಡಿ ಅಧೀಕ್ಷಕ ಇಂಜಿನಿಯರುಗಳಿಂದ ಅನುಮೋದಿಸಿಕೊಂಡು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳತಕ್ಕದ್ದು. ಅನುದಾನದ ಬೇಡಿಕೆಯ ಪ್ರಸ್ತಾವನೆಯನ್ನು ಮುಖ್ಯ ಇಂಜಿನಿಯರುಗಳು ಸರ್ಕಾರಕ್ಕೆ ಕೂಡಲೇ ಸಲ್ಲಿಸುವುದು. ರಸ್ತೆಗಳ ಸಾಮಾನ್ಯ ನಿರ್ವಹಣೆಗೆ ಮೇಲೆ ತಿಳಿಸಿದ ಅತ್ಯವಶ್ಯವಾದ ಕಾಮಗಾರಿಗಳನ್ನು ಮಾತ್ರ ಅಳವಡಿಸಿ ಕಾರ್ಯಕ್ರಮ ಪಟ್ಟಿಯನ್ನು ಅನುಮೋದಿಸಲು ಸೂಚಿಸಿದೆ. ರಸ್ತೆಗಳಲ್ಲಿ ಯೋಗ್ಯ ಸಂಚಾರವನ್ನು ಕಾಪಾಡಲು ಅತೀ ತುರ್ತಾಗಿ ಅಗತ್ಯವಿರುವ ನಿರ್ವಹಣಾ ಕಾಮಗಾರಿಗಳನ್ನು ಅನುದಾನ ನಿರೀಕ್ಷಿಸಿ ಅಧೀಕ್ಷಕ ಇಂಜಿನಿರ್‌ರವರ ಅನುಮೋದನೆ ಪಡೆದು ಕೈಗೊಳ್ಳಬಹುದು. ಈ ಬಗ್ಗೆ ಯಾವುದೇ

ಅಧಿಕಾರಿಗಳು ನಿರ್ಲಕ್ಷ್ಯವಹಿಸಿರುವುದು ಸರ್ಕಾರದ ಗಮನಕ್ಕೆ ಬಂದಲ್ಲಿ ಅಂತಹ ಅಧಿಕಾರಿಗಳ ಮೇಲೆ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು.

(ಸುಧೀರ್ ಕೃಷ್ಣ)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಲೋಕೋಪಯೋಗಿ ಇಲಾಖೆ.

ಪ್ರತಿ:
ಅ) ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ, ದ/ಉ/ರಾಹೆ.
ಆ) ಅಧೀಕ್ಷಕ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳ ವೃತ್ತ, ಲೋಇ.
ಇ) ಕಾರ್ಯಪಾಲಕ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡ ವಿಭಾಗ.

ಪ್ರತಿ ಮಾಹಿತಿಗಾಗಿ:
1. ಸರ್ಕಾರದ ಉಪ ಕಾರ್ಯದರ್ಶಿ, (ಸಂಪರ್ಕ ಮತ್ತು ಕಟ್ಟಡ), ಲೋಇ.
2. ಅಂತರಿಕ ಆರ್ಥಿಕ ಸಲಹೆಗಾರರು, ಲೋಇ.
3. ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರ ಆಪ್ತ ಕಾರ್ಯದರ್ಶಿ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಲೋಇ.
5. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಸಹಾಯಕರು. ಲೋಇ.
6. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು. ಲೋಇ.